ಇವೆಲ್ಲವೂ ಪ್ರಾಣಿಸಹಜ ಕ್ರಿಯೆಗಳೇ. ಇದಕ್ಕೆ ಮೀರಿದ ಪ್ರವೃತ್ತಿಯನ್ನು ಮನುಷ್ಯವರ್ಗ ಕಾಲಾನುಕ್ರಮದಲ್ಲಿ ಬೆಳೆಸಿಕೊಂಡು ಬಂದದ್ದು. ಯೋಚಿಸುವ ಮತ್ತು ತರ್ಕಿಸುವ ವಿಶೇಷ ಗುಣಗಳಿಂದ ಗಳಿಸಿಕೊಂಡ ಅರಿವು ಮನುಷ್ಯರಿಗೆ ತಾವು ಜೀವಿಸುವ ಪರಿಸರವನ್ನು ಒಪ್ಪಿಕೊಳ್ಳುವ ಮನೋವಿಶಾಲತೆಯನ್ನು ಬೆಳೆಸಿಕೊಡುತ್ತದೆ. ಪ್ರಾಣಿ ಮತ್ತು ಮನುಷ್ಯರಿಗೆ ಇಷ್ಟೇ ವ್ಯತ್ಯಾಸ. ನಿಮ್ಮ ನಾಯಿಗೂ ನಿಮ್ಮ ಹೊಸ ಮನೆಯ ವಾತಾವರಣ ಇನ್ನೂ ಹೊಂದಿಕೆಯಾಗಿಲ್ಲ. ಅದಕ್ಕೆ ಹೊಸದಾಗಿ ತನ್ನ ವಲಯ ಗುರ್ತಿಸಿಕೊಳ್ಳಬೇಕಾಗಿ ಬಂದಿದೆ. ನೀವು ಏನೆಲ್ಲ ಮಾಡಬೇಕೆಂದು ಇಲ್ಲಿ ವಿವರಿಸಿದ್ದೇನೆ... ಇಲ್ಲಿ ಸೂಚಿಸಿದ ಕೆಲವೆಲ್ಲ ಕ್ರಮಗಳನ್ನು ಕೈಗೊಂಡರೆ ಮುಂದೆ ಸರಿಹೋಗುತ್ತದೆ...' ಅನ್ನುತ್ತಾ ಪ್ರಿಂಟ್ ಮಾಡಿಟ್ಟುಕೊಂಡಿದ್ದ ಸಲಹೆಗಳ ಒಂದು ಹಾಳೆಯನ್ನು ನೀಡಿದ್ದರು. ಅವರ ಸೂಚನೆಯಂತೆ ನಾಯಿಯನ್ನು ತಮ್ಮ ಸೈಟಿನ ಮೂಲೆ ಮೂಲೆಯಲ್ಲಿ ಸುತ್ತಾಡಿಸಿ ಪರಿಚಯ ಮಾಡಿಸುವ ಕೆಲಸವನ್ನು ರಾಯರು ಕೆಲದಿನಗಳಲ್ಲೇ ಯಶಸ್ವಿಯಾಗಿ ಪೂರೈಸಿದ್ದರು.



★★★

ಯಾರಿಗೂ ಚಂದಾ ಕೊಡೋಲ್ಲ ಎಂದು ಬಂದವರನ್ನು ಹಿಂದೆ ಕಳುಹಿಸಿದ ಮಾರನೇ ದಿನ ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಕಾಲಿಂಗ್ ಬೆಲ್ ಹೊಡೆದುಕೊಂಡಾಗ ಬಾಗಿಲು ತೆರೆದು ಹೊರಬಂದರು ರಾಯರು. ನಾಲ್ಕೈದು ಬಟನ್ ಬಿಚ್ಚಿದ್ದ ಶರ್ಟು ಹಾಕಿಕೊಂಡಿದ್ದ ನಡುಪ್ರಾಯದವನೊಬ್ಬ ಎದುರಿಗೆ ನಿಂತಿದ್ದ. ಕೈಯಲ್ಲಿ ಇನ್ನೊಬ್ಬ ಹುಡುಗನ ಕಾಲರ್ ಹಿಡಿದು ಎಳೆದು ತಂದಿದ್ದ. 'ಈ ಮುಟ್ಠಾಳ ಮೇಡಮ್ಮಿನ ಸರ ಎಳೆದೊಯ್ದವ ಸಾರ್... ಮೇಡಮ್ಮನ್ನು ಕರೀರಿ, ಇವನೇಯಾಂತ ಗುರುತು ಹಿಡೀರಿ ಸಾರ್' ಅಂದ. 'ತಪ್ಪಾಯ್ತು ಅಂತ ಅವರ ಕಾಲಿಗೆ ಬೀಳೋ' ಅಂತ ಹಿಡಿದ ಕೈಯಲ್ಲೇ ಆತನನ್ನು ಅಕ್ಷರಶಃ ರಾಯರ ಕಾಲಿನತ್ತ ತಳ್ಳಿದ್ದ. ಸರಗಳ್ಳನನ್ನು ಒಂದೇ ಬಾರಿ ಕಂಡಿದ್ದ ರಾಯರಿಗೆ ಈತನೇ ಹೌದೆನಿಸಿದರೂ ಬಾಗಿಲ ಬಳಿ ಬಂದಿದ್ದ ಲೀಲಕ್ಕನನ್ನು ನೋಡಿ 'ಇವನೇ ತಾನೇ?' ಅಂತ ಪ್ರಶ್ನಿಸಿದರು. 'ಹೌದು ಇವನೇ' ಅನ್ನುತ್ತ ತಲೆಯಾಡಿಸಿದರು ಲೀಲಕ್ಕ.

'ನನ್ನ ಏರಿಯಾಕ್ಕೆ ಬಂದು ಈ ತರಹ ಹಲ್ಕಾಕೆಲಸ ಮಾಡುತ್ತೀಯೇನೋ ಸುವರ್ ನನ್ಮಗನೇ... ಸಿಗಿದು ಹಾಕ್ತೀನಿ... ಸರ ವಾಪಸ್ಸು ಕೊಡೋ...' ಕಾಲೆದುರು ಬಿದ್ದಿದ್ದವನ್ನು ಒದ್ದು ನುಡಿದ ಆತ.